ಉದರ ದರ್ಶಕ ಶಸ್ತ್ರ ಚಿಕಿತ್ಸೆ

2754 (4031), ಶ್ರೀ ಅಶೋಕ್ ಖೇಣಿ (ಬೀದರ ದಕ್ಷಿಣ)

ಅ) ಕುಟುಂಬ ಯೋಜನೆಯಲ್ಲಿ ಪ್ರಮುಖವಾಗಿ ಉದರದರ್ಶಕ ಶಸ್ತ್ರ ಚಿಕಿತ್ಸೆಯು ಜಾರಿಯಲ್ಲಿದ್ದು, ಈ ಯೋಜನೆ ಮತ್ತು ತಂತ್ರಜ್ಞಾನವು ಸುಮಾರು ಇಪ್ಪತ್ತು ವರ್ಷಗಳಿಗೂ ಹಳೆಯದಾಗಿದ್ದು, ಅವೈಜ್ಞಾನಿಕ ಪದ್ಧತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆರೋಗ್ಯ ಶಿಬಿರಗಳಲ್ಲಿ/ಆರೋಗ್ಯ ಕೇಂದ್ರಗಳಲ್ಲಿ ಈ ತಂತ್ರಜ್ಞಾನಕ್ಕೆ ಬೇಕಾದ ವ್ಯವಸ್ಥಿತವಾದ ಮೇಜುಗಳು ಲಭ್ಯವಿಲ್ಲದೆ ಬೆಂಚು/ಇಳಿಜಾರು ಮೇಜುಗಳನ್ನು ಉಪಯೋಗಿಸುತ್ತಿರುವುದು ನಿಜವೇ;

ಇ) ಇದೊಂದು ಅವೈಜ್ಞಾನಿಕ ಪದ್ಧತಿಯಾಗಿದ್ದು, ರೋಗಿಗಳಿಗೆ ಹಾಗೂ ಶಸ್ತ್ರಚಿಕಿತ್ಸಕರಿಗೆ ತೊಂದರೆಯಾಗುತ್ತಿರುವುದು ನಿಜವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹೊಸ ತಂತ್ರಜ್ಞಾನದ ಉದರದರ್ಶಕ ಶಸ್ತ್ರಚಿಕಿತ್ಸಾ ಟೇಬಲ್‌ಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿಲ್ಲವೇ;

ಊ) ದೊರೆಯುತ್ತಿದ್ದರೆ, ಅವುಗಳನ್ನು ಖರೀದಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಪದ್ಧತಿಯೂ ಅವೈಜ್ಞಾನಿಕವಾಗಿರುವುದಿಲ್ಲ, ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಯಂತೆ ಈ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.

ಆ) ಈ ತಂತ್ರಜ್ಞಾನವು ಭಾರತದಲ್ಲಿ 40 ವರ್ಷಗಳಿಂದ ಜಾರಿಯಲ್ಲಿದ್ದು, 40 ವರ್ಷಗಳಿಂದಲೂ ಇಳಿಜಾರು ಮೇಜುಗಳನ್ನು ಉಪಯೋಗಿಸುತ್ತಿದ್ದು, ಈಗಲೂ ಮುಂದುವರೆಸಲಾಗುತ್ತಿದೆ.

ಇ) ಇದೊಂದು ಅವೈಜ್ಞಾನಿಕ ಪದ್ಧತಿಯಾಗಿದ್ದು, ಇದರಿಂದ ರೋಗಿಗಳಿಗಾಗಲಿ, ಶಸ್ತ್ರಚಿಕಿತ್ಸಕರಿಗಾಗಲಿ ತೊಂದರೆ ಇರುವುದಿಲ್ಲ.

ಈ) ದೊರೆಯುತ್ತಿವೆ.

ಊ) ಪ್ರಸ್ತುತ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದಾದ ಲ್ಯಾಪ್ರೋಸ್ಕೋಪಿಕ್ ಯಂತ್ರ ಮತ್ತು ಟೇಬಲ್ ಬಳಸಿ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆ ಸೇವೆ ನೀಡಲಾಗುತ್ತಿದೆ. ಹೊಸ ತಂತ್ರಜ್ಞಾನದ ಟೇಬಲ್‌ಗಳು ದುಬಾರಿಯಾಗಿದ್ದು ಸಾಗಾಣಿಕೆ ಕಷ್ಟಸಾಧ್ಯವಾಗಿರುವುದರಿಂದ ಅಲ್ಲದೇ ಈಗಾಗಲೇ ಇರುವ ಟೇಬಲ್‌ಗಳಲ್ಲಿ ಯಾವುದೇ ಸಮಸ್ಯೆ ಇಲ್ಲದಿರುವುದರಿಂದ ಹೊಸ ತಂತ್ರಜ್ಞಾನದ ಟೇಬಲ್ ಖರೀದಿಸುವ ಪ್ರಸ್ತಾವನೆ ಇರುವುದಿಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು

2755 (4032), ಶ್ರೀ ಅಶೋಕ್ ಖೇಣಿ (ಬೀದರ ದಕ್ಷಿಣ)

ಅ) ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಯಾವುವು;

ಆ) ಹಾಗಿದ್ದರೆ, ಯಾವ ಯಾವ ಇಲಾಖೆಗಳ ಯೋಜನೆಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಯೋಜನೆಗಳಾಗಿವೆ; (ವಿವರ ನೀಡುವುದು);

ಇ) ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಬಂದ ಇಲಾಖಾವಾರು ಅನುದಾನ ಎಷ್ಟು; (ಅನುದಾನದ ವಿವರ ಒದಗಿಸುವುದು)?

ಶ್ರೀ ಎಸ್.ಆರ್.ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)